

# ಭೂತವಲ್ಲವದು, ಸ್ಕಿರೆಝೋಫ್ರೇನಿಯಾ

ಆ ಮುದುಕಿ ಇದ್ದಕ್ಕಿದ್ದಂತೆ ಉರ್ದು ಭಾಷೆಯಲ್ಲಿ ಅವಾಚ್ಯ ಶಬ್ದಗಳನ್ನು ಬಳಸಿ ಕೂಗಾಡತೊಡಗಿದಳು. ಯಾವಾಗಲೂ ಸೌಮ್ಯವಾಗಿರುವ ಈ ಅಜ್ಜಿ ಕನ್ನಡತಿ, ಬೇರೆ ಭಾಷೆ ಅರಿಯದ ಸಂಪ್ರದಾಯಸ್ಥೆ, ಹಳೆಯಕಾಲದ ಗೃಹಿಣಿ. ಹೀಗಿರುವಾಗ ಅನ್ಯಭಾಷೆಯಲ್ಲಿ ಕೂಗುತ್ತಾ ಒದರಾಡುವುದೇ ಅಲ್ಲದೆ, ಕೆಲವು ಸಮಯದ ನಂತರ  ಏನಾಯಿತು ನನಗೆ? ಎಲ್ಲಿದ್ದೇನೆ? ಎಂದು ಕೇಳುವ ಮಟ್ಟವನ್ನು ಮುಟ್ಟಿದ್ದುದರಿಂದ ಅವಳನ್ನು ಭೂತ ಮೆಟ್ಟಿರಲೇಬೇಕು ಎಂದು ಸುತ್ತಲಿನವರು ತೀರ್ಮಾನಕ್ಕೆ ಬಂದರು. ಅಜ್ಜಿಗೆ ಅಂದಿನಿಂದ ವಿವಿಧ ಮಂತ್ರವಾದಿಗಳಿಂದ ಭೂತೋಚ್ಚಾಟನೆ  ಎಂಬ ಕಿರುಕುಳ ಆರಂಭವಾಯಿತು.

ಇದು ಒಂದು ಅಜ್ಜಿಗೆ, ಒಂದು ಮನೆಗೆ ಸಂಬಂಧಿಸಿದ್ದಲ್ಲ. ಅಜ್ಜಿಯ ಜಾಗದಲ್ಲಿ ಸೊಸೆ, ಮಗ, ಮಗಳು, ಅಜ್ಜ, ಯಾರಾದರೂ ಇರಬಹುದು, ಅವರು ಇದ್ದಕ್ಕಿದ್ದಂತೆ ವಿಪರೀತ ತಿನ್ನುವುದು, ಅನ್ಯಭಾಷೆ ಬಳಸುವುದು ಕಂಡುಬರುತ್ತದೆ. ಕಾರಣ ಕಂಡುಹಿಡಿಯಲಾಗದವರು ಬೂತ ಮೆಟ್ಟಿತು ಎನ್ನುತ್ತಾರೆ.

ಆದರೆ ಆಗುವುದಾದರೂ ಏನು?

ಆ ಅಜ್ಜಿ ದಿನವೂ ನೀರು ಹಿಡಿಯಲು ಸಿಹಿನೀರಿನ ಬಾವಿಯ ಬಳಿ ಹೋಗುತ್ತಿತ್ತು. ಅಲ್ಲಿ ಕ್ಯೂ ಇದ್ದಾಗ ಕಾಯಬೇಕಾದ ಸಂದರ್ಭಗಳಲ್ಲಿ ಪಕ್ಕದಲ್ಲೇ ಇದ್ದ ಒಬ್ಬ ಮುಸಲ್ಮಾನರ ಗ್ಯಾರೇಜಿನಿಂದ ಉರ್ದು, ಹಿಂದಿಯಲ್ಲಿ ಅವಾಚ್ಯವಾದ ಬೈಗುಳಗಳು ಆಕೆಯ ಕಿವಿಯಮೇಲೆ ಅಯಾಚಿತವಾಗಿ ಬೀಳುತ್ತಿದ್ದವು. ಮಂತ್ರಗಳು, ಜನಪದಗೀತೆಗಳು, ಕೀರ್ತನೆಗಳನ್ನೇ ಕರ್ಣಾಕರ್ಣಿಯಾಗಿ ಕಲಿತ ಮುದುಕಿಗೆ ಈ ಅವಾಚ್ಯ ಶಬ್ದಗಳೂ ಮನಗತವಾದುದು ಅಚ್ಚರಿಯೇನಲ್ಲ. ಸೌಮ್ಯ ಸ್ವಭಾವದ ಈಕೆಗೆ ಅದು ತನ್ನಲ್ಲಿ ಸೇರಿಹೋದುದುರ ಅರಿವೂ ಮೂಡಲಿಲ್ಲ. ಮುಂದೊಂದು ದಿನ ಅಜ್ಜ ಇಲ್ಲವಾಗಿ, ತನಗೆ ಪ್ರಾಶಸ್ತ್ಯ ಇಲ್ಲವಾಗಿ, ಮಗನೇ ಆಸ್ತಿಯನ್ನು ಕಸಿದುಕೊಳ್ಳುವ ಹಂತ ತಲುಪಿದಾಗ ಈ ಅಜ್ಜಿಗೆ ಮಾನಸಿಕವಾಗಿ ಆಘಾತವಾಗಿ ಅಸ್ವಸ್ಥವಾಯಿತು. ಕೆಲವೇ ದಿನಗಳಲ್ಲಿ ಮೊದಲಬಾರಿಗೆ ಭೂತ ಕಾಣಿಸಿಕೊಂಡಿತು!

ಮನುಷ್ಯನ ಮನಸ್ಸು ಒಂದು ಮಟ್ಟದವರೆಗೆ ಮಾತ್ರ ಒತ್ತಡ ತಡೆದುಕೊಳ್ಳುತ್ತದೆ. ಒತ್ತಡ ಭರಿಸದಾದಾಗ ಮೂರ್ಛೆ ಹೋಗುವುದರ ಮೂಲಕ ಮನಸ್ಸು ವಿಶ್ರಾಂತಿ ಪಡೆಯುತ್ತದೆ. ಆದರೆ ಎಲ್ಲರೂ ಮೂರ್ಛೆ ಬೀಳುವುದಿಲ್ಲ. ಕೆಲವರಲ್ಲಿ ಚಿಂತೆ ಮಡುಗಟ್ಟುತ್ತಲೇ ಸಾಗುತ್ತದೆ. ಹೀಗೆ ಮಡುಗಟ್ಟಿದ ಚಿಂತೆಗೆ ಒಂದು ಹೊರಬರುವ ಮಾರ್ಗ ಬೇಕಾಗುತ್ತದೆ. ಆ ಮಾರ್ಗಕ್ಕೆ ಮನಸ್ಸು ಆರಿಸಿಕೊಳ್ಳುವುದು ಮಾಮೂಲಿಗಿಂತಲೂ ವಿಭಿನ್ನವಾದ ಒಂದು ವ್ಯಕ್ತಿತ್ವವನ್ನು.

ಈ ಪರಿಸ್ಥಿತಿಯನ್ನು ಇಂಗ್ಲಿಷ್‌ನಲ್ಲಿ ಸ್ಕಿರೆಝೋಫ್ರೇನಿಯಾ  ಅಥವಾ ಸ್ಪ್ಲಿಟ್ ಪರ್ಸನಾಲಿಟಿ ಎನ್ನುತ್ತಾರೆ.

ಈ ಭಿನ್ನ- ವ್ಯಕ್ತಿತ್ವವನ್ನು ಹೊಂದಿದ ವ್ಯಕ್ತಿ, ಆ ಭಿನ್ನತೆಯ ಛಾಯೆಯಲ್ಲಿದ್ದಾಗ ತಾನು ತಾನಲ್ಲ ಎಂದು ತೋರಿಸುವ ಪ್ರಯತ್ನದಲ್ಲಿ ಹೆಚ್ಚು ಹೆಚ್ಚು ತಿನ್ನುತ್ತಾನೆ, ಸಾಮಾನ್ಯವಾದ ಸ್ಥಿತಿಗಿಂತಲೂ ಭಿನ್ನವಾಗಿರಲು ಯತ್ನಿಸುತ್ತಾನೆ, ತಾನು ಸಾಮಾನ್ಯವಾಗಿ ಬಳಸದ ಭಾಷೆಯನ್ನು ಬಳಸುತ್ತಾನೆ ಹಾಗೂ ತಾನು ಇನ್ಯಾವುದೋ ವ್ಯಕ್ತಿಯ ಆತ್ಮ ಎಂದು ಹೇಳಿಕೊಳ್ಳುತ್ತಾನೆ. ಆತ್ಮ ಎಂದರೆ ಭೂತ ಎಂದು ತಿಳಿಯುವ ಮಂದಿ ಅವನಿಗೆ ಬೇವಿನ ಸೊಪ್ಪಿನಿಂದ ಹೊಡೆದು, ಮಂತ್ರವಾದಿಗಳ ಬಳಿಗೆ ಕರೆದೊಯ್ಯುತ್ತಾರೆ. ಕೆಲವೊಮ್ಮೆ ಸ್ಪ್ಲಿಟ್ ಪರ್ಸನಾಲಿಟಿಗೆ ಒಳಗಾಗದೆ, ಬರಿದೇ ಆಟ ಕಟ್ಟಿರುವವರು, ಮಂತ್ರವಾದಿಗಳ ಏಟು ತಡೆಯಲಾರದೆ ಬಿಟ್ಟು ಹೋಗ್ತೀನ್ರಪ್ಪೋ, ಹೊಡೀಬೇಡ್ರಪ್ಪೋ  ಎನ್ನುತ್ತಾ ಮರುದಿನದಿಂದ ಆಟ ಬಂದ್ ಮಾಡುತ್ತಾರೆ. ಆದರೆ ಸ್ಪ್ಲಿಟ್ ಪರ್ಸನಾಲಿಟಿ ಸ್ಥಿತಿಗೆ ಒಳಗಾದವರನ್ನು ಯಾವ ಬೇವಿನಸೊಪ್ಪೂ, ಮಂತ್ರದಂಡವೂ ಬಿಡಿಸುವುದಿಲ್ಲ.

ಸ್ಪ್ಲಿಟ್ ಪರ್ಸನಾಲಿಟಿ ಇರುವ ವ್ಯಕ್ತಿ ಒಂದು ನಿರ್ದಿಷ್ಟ ಪರಿಸ್ಥಿತಿಗೆ ಒಳಗಾದಾಗ ಮಾತ್ರ ಮತ್ತೊಂದು ವ್ಯಕ್ತಿತ್ವವನ್ನು ಆತುಕೊಳ್ಳುತ್ತಾನೆ ಎನ್ನುವುದು ಗಮನದಲ್ಲಿರಿಸಿಕೊಳ್ಳಬೇಕಾದ ಅಂಶವಾಗಿದೆ. ಇತರ ಸಂದರ್ಭಗಳಲ್ಲಿ ಸಾಮಾನ್ಯ ವರ್ತನೆಯನ್ನೇ ಹೊಂದಿರುವ ಈತ ಮನೋರೋಗಿ ಎಂದು ತಿಳಿದುಬರುವುದು ಬಹಳ ಕಷ್ಟ. ನಿರ್ದಿಷ್ಟ ಪರಿಸ್ಥಿತಿಯ ಪರಿಧಿಯಲ್ಲಿ ಮಾತ್ರ ಇದು ವ್ಯಕ್ತ. ಉದಾಹರಣೆಗೆ ತನ್ನ ಚಿಕ್ಕಪ್ಪನಿಂದಲೋ, ಮಾವನಿಂದಲೋ ಬಾಲ್ಯದಲ್ಲೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಬಾಲೆ ದೊಡ್ಡವಳಾದಾಗ ಅಂತಹ ವ್ಯಕ್ತಿಗಳನ್ನು ಕಂಡಾಗ ಮಾತ್ರ ರೊಚ್ಚಿಗೇಳಬಹುದು, ಕೋರ್ಟಿನಲ್ಲಿ ಅನ್ಯಾಯದ ತೀರ್ಪನ್ನು ಪಡೆದು, ಎದುರಾಡಲಾಗದವನು ಕಪ್ಪು ಬಟ್ಟೆ ಕಂಡಾಗಲೆಲ್ಲಾ ಪರಿವರ್ತನೆಗೊಳ್ಳಬಹುದು. ವ್ಯಕ್ತಿ ತನ್ನತನವನ್ನು ಬಿಟ್ಟು, ವಿಭಿನ್ನವಾಗಿ ವರ್ತಿಸತೊಡಗಿದಾಗ ಅವನು ಹಾಗೆ ವರ್ತಿಸಿದ ಸಂದರ್ಭಗಳನ್ನು ಮತ್ತು ಪರಿಸರವನ್ನು ಗಮನಿಸಿ ಚಿಕಿತ್ಸೆ ನೀಡುವುದು ಅವಶ್ಯಕವಾಗುತ್ತದೆ.

ಭಿನ್ನ- ವ್ಯಕ್ತಿತ್ವ ಒಂದು ಗಂಭೀರವಾದ ಮಾನಸಿಕ ಖಾಯಿಲೆ. ಇಂತಹ ಖಾಯಿಲೆಗೆ ಒಳಗಾದವರು ಕೊಲೆಗಳನ್ನು ಮಾಡಿಯೂ, ಅವುಗಳ ಬಗ್ಗೆ ಇನಿತೂ ಜ್ಞಾಪಕವಿಲ್ಲದೆ ಮಾಮೂಲಿ ಜೀವನ ಸಾಗಿಸುತ್ತಿರುತ್ತಾರೆ. ಒಂದು ವ್ಯಕ್ತಿತ್ವದಿಂದ ಮತ್ತೊಂದು ವ್ಯಕ್ತಿತ್ವಕ್ಕೆ ಬದಲಾಗುವ ಇವರಲ್ಲಿ ಒಂದು ಸೌಮ್ಯ ವ್ಯಕ್ತಿತ್ವ, ಮತ್ತೊಂದು ಕರಾಳ ವ್ಯಕ್ತಿತ್ವ ಇರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಡಾಕ್ಟರ್ ಜೆಕಿಲ್ ಅಂಡ್ ಮಿಸ್ಟರ್ ಹೈಡ್ ಕಥೆಯಲ್ಲಿ ಮೊದಲು ಪ್ರಸ್ತಾಪವಾದ ಈ ಭಿನ್ನ- ವ್ಯಕ್ತಿತ್ವ ಹಲವಾರು ದಶಕಗಳಿಂದ ಮನೋವೈದ್ಯರಿಗೆ ವಿಸ್ಮಯವಾಗಿಯೇ ಉಳಿದಿತ್ತು. ಈಗಲೂ ಈ ನಿಗೂಢತೆಯನ್ನು ವೈದ್ಯಶಾಸ್ತ್ರವು ಸಂಪೂರ್ಣವಾಗಿ ಅರಿಯಲು ಸಾಧ್ಯವಾಗಿಲ್ಲವಾದರೂ ವಿದೇಶಗಳಲ್ಲಿ ಹಲವಾರು ಭಿನ್ನ- ವ್ಯಕ್ತಿತ್ವಗಳ ಕೇಸ್‌ಗಳಿಗೆ ಚಿಕಿತ್ಸೆ ನೀಡಿರುವ ಮಾಹಿತಿಗಳಿವೆ. ಆ ಮಾಹಿತಿಗಳ ಆಧಾರದ ಮೇಲೆ ಚಿಕಿತ್ಸೆ ನೀಡಬಲ್ಲ ವೈದ್ಯರು ನಮ್ಮಲ್ಲೂ ಇದ್ದಾರೆ.

ಆದ್ದರಿಂದ ಮನುಷ್ಯ ವಿಚಿತ್ರವಾಗಿ ಆಡಿದಾಗ ಭೂತ ಬಂತು  ಎನ್ನದೆ ಮಾನಸಿಕ ವೈದ್ಯರತ್ತ ದಾಪುಗಾಲು ಹಾಕುವುದು ಅವಶ್ಯಕ, ಸೂಕ್ತ.

■ ವೈ–ಚಾರಿ